# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಹೇಳಿಕೆ.

**ಸೂಚನೆ:-**

ಕೋಲಾರ ಜಿಲ್ಲೆಯಲ್ಲಿ ಸುಮಾರು 2.36 ಲಕ್ಷ ಜಾನುವಾರುಗಳಿದ್ದು, ಲಕ್ಷಾಂತರ ಕುಟುಂಬಗಳು ಹೈನುಗಾರಿಕೆ ನಂಬಿ ಬದುಕು ಸಾಗಿಸುತ್ತಿದ್ದಾರೆ. ಪ್ರಸ್ತುತ ಜಿಲ್ಲೆಯಲ್ಲಿ ಬರ ಪರಿಸ್ಥಿತಿ ತಲೆದೋರುತ್ತಿದ್ದು, ಇದರಿಂದ, ರಾಸುಗಳಿಗೆ ಕುಡಿಯುವ ನೀರು, ಮೇವಿನ ಅಭಾವದ ಮಧ್ಯದಲ್ಲಿ ನಾನಾ ರೋಗಗಳು ಹೆಚ್ಚಾಗುತ್ತಿದೆ. ರಾಸುಗಳಿಗೆ ಈಗಾಗಲೇ ಪಶು ಸಂಗೋಪನೆ ಇಲಾಖೆಯಿಂದ ಚರ್ಮಗಂಟು ರೋಗ ನಿರೋಧಕ ಚುಚ್ಚು ಮದ್ದನ್ನು ನೀಡಲಾಗಿದ್ದರೂ ಸಹಾ, ಇತ್ತೀಚೆಗೆ ಚರ್ಮಗಂಟು ರೋಗವು ಹಲವಾರು ಜಾನುವಾರುಗಳಲ್ಲಿ ಕಂಡುಬರುತ್ತಿದ್ದು, ಇದರಿಂದ ಹೈನುಗಾರಿಕೆಯಲ್ಲಿ ತೊಡಗಿರುವ ಬಹಳಷ್ಟು ಜಿಲ್ಲೆಯ ರೈತರುಗಳು ಆತಂಕದಲ್ಲಿರುತ್ತಾರೆ. ಈ ಚರ್ಮಗಂಟು ರೋಗವನ್ನು ಹತೋಟಿಗೆ ತರಲು ಸೂಕ್ತ ತುರ್ತು ಕ್ರಮಗಳನ್ನು ಜರುಗಿಸುವಂತೆ ಕುರಿತು.

**ಹೇಳಿಕೆ:-**

ಚರ್ಮಗಂಟು ರೋಗವು ವೈರಸ್ ರೋಗಾಣುವಿನಿಂದ ಬರುವ ರೋಗವಾಗಿದ್ದು, ಅದರ ನಿಯಂತ್ರಣಕ್ಕಾಗಿ ವರ್ಷಕ್ಕೊಮ್ಮೆ ಲಸಿಕೆ ಹಾಕಲಾಗುತ್ತಿದೆ. ಕೋಲಾರ ಜಿಲ್ಲೆಯಲ್ಲಿ 2022-2023ನೇ ಸಾಲಿನ ಆಗಸ್ಟ್-2022 ರಿಂದ ನವೆಂಬರ್-2022 ವರೆಗಿನ ಮಾಹೆಗಳಲ್ಲಿ ಸದರಿ ರೋಗದ ವಿರುದ್ಧ ಜಿಲ್ಲೆಯ 2,36,162 ಜಾನುವಾರುಗಳ ಪೈಕಿ ಒಟ್ಟು 2,16,947 ಜಾನುವಾರುಗಳಿಗೆ (ಅಂದರೆ ಶೇಕಡ 92 ರಷ್ಟು ಜಾನುವಾರುಗಳು) ಲಸಿಕೆ ಹಾಕಲಾಗಿರುತ್ತದೆ.

2023-24ನೇ ಸಾಲಿನ ಮೇ-2023 ಮತ್ತು ಜೂನ್-2023 ರ ಮಾಹೆಗಳಲ್ಲಿ 2,01,583 ಜಾನುವಾರುಗಳಿಗೆ ಚರ್ಮಗಂಟು ರೋಗದ ನಿಯಂತ್ರಣಕ್ಕಾಗಿ ಲಸಿಕೆ ಹಾಕಲಾಗಿರುತ್ತದೆ. ಈ ಅವಧಿಯಲ್ಲಿ ಚರ್ಮಗಂಟು ರೋಗದ ಯಾವುದೇ ರೋಗೋದ್ರೇಕವು ವರದಿಯಾಗಿರುವುದಿಲ್ಲ.

ಜಿಲ್ಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಸದರಿ ರೋಗದ ನಿಯಂತ್ರಣಕ್ಕಾಗಿ ಹೊಸದಾಗಿ ಜನಿಸಿದ ಕರುಗಳಿಗೆ ಹಾಗೂ ಬಿಟ್ಟು ಹೋದ ಜಾನುವಾರುಗಳಿಗೆ ಚರ್ಮಗಂಟು ರೋಗದ ವಿರುದ್ಧ ಲಸಿಕೆ ಹಾಕಲು 50,000 ಡೋಸ್ ಮೇಕೆ ಸಿಡುಬು ಲಸಿಕೆಯನ್ನು ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ (IAH & VB), ಬೆಂಗಳೂರು ಸಂಸ್ಥೆಯಿಂದ ಪಡೆದು ದಾಸ್ತಾನೀಕರಿಸಲಾಗಿದೆ ಹಾಗೂ ಲಸಿಕೆ ಮಾಡಲಾಗುತ್ತಿದೆ.

ಆದಾಗ್ಯೂ ಚರ್ಮಗಂಟು ರೋಗದಿಂದ ಬಳಲುತ್ತಿದ್ದ ಜಿಲ್ಲೆಗಳಲ್ಲಿನ ಜಾನುವಾರುಗಳಿಗೆ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಮಾರ್ಗದರ್ಶಿಗಳ ಪ್ರಕಾರ ಚಿಕಿತ್ಸೆ ನೀಡಲಾಗುತ್ತಿದ್ದು, ಚರ್ಮಗಂಟು ರೋಗವು ಸಂಪೂರ್ಣ ನಿಯಂತ್ರಣದಲ್ಲಿರುತ್ತದೆ. ಸಾಕಷ್ಟು ಔಷಧಿ ದಾಸ್ತಾನು ಇಡಲು ಸೂಚಿಸಲಾಗಿದೆ. ಆದರೆ ಕೆಲವೊಂದು ಕರುಗಳಲ್ಲಿ ಚರ್ಮಗಂಟು ರೋಗ ಬರುತ್ತಿದ್ದು, ಅದು ಅಷ್ಟೊಂದು ತೀವ್ರವಾಗಿಲ್ಲದಿರುವುದನ್ನು ಗಮನಿಸಲಾಗಿದೆ. ಕೋಲಾರ ತಾಲ್ಲೂಕಿನ ತೊಟ್ಲಿ ಗ್ರಾಮದಲ್ಲಿ ಲಸಿಕೆ ಮಾಡದ 2 ಕರುಗಳಿಗೆ ಚರ್ಮಗಂಟು ರೋಗ ಕಾಣಿಸಿಕೊಂಡಿದ್ದು ಚಿಕಿತ್ಸೆ ನೀಡಿದ ನಂತರ ಸದರಿ ರೋಗವು ವಾಸಿಯಾಗಿರುತ್ತದೆ.

**ಇ-ಪಸಂಮೀ 24 ಸಲೆವಿ 2024**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**